MYSORE LEGISLATIVE ASSEMBLY.

FOURTH DAY.

Thursday, 24th February 1955.

The House met in the Assembly Hall, Old Public Offices, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.,) in the Chair.

QUESTIONS AND ANSWERS.

Rice Mills holding Government Paddy Stocks in Krishnarajanagar Taluk.

Q.—54. Sri S. H. THAMMIAH *alias* HANUMANTHEGOWDARA THAMMIAH (Krishnarajanagar). —

Will the Government be pleased to state :—

(*a*) the number and names of rice mills in Krishnarajanagar Taluk where Government have stocked paddy in the year 1953-54 and the quantity stocked in each ;

(*b*) the rules subject to which the mill-owners are holding in stock the paddy belonging to Government ;

(*c*) the assurance the Government have taken from the mill-owners or the hold the Government have on them ?

A.—Sri H. SIDDAVEERAPPA (Minister for Home and Industries).—

(*a*) Statement appended below.

(*b*) and (*c*). The mill-owners hold stocks of Government paddy as per the terms of agreement (*vide* copy placed on the Table—placed in the Legislature Library No. 2/L.A.—1955).

Statement showing the stocks of Paddy held in several Rice Mills of Krishnarajanagar Taluk as on 2nd April 1954 on Government account.

	Name of Rice Mill	*Stock of paddy*	
		P.	S.
1.	Sri Balaji Rice Mills, K. R. Nagar	1,559	39
2.	Sri Krishnarajendra Rice Mills, Kaggere	6,467	38
3.	Sri Basaveswaraswamy Rice Mills, Hebbal ...	8,780	22
4.	Sri Chandranatha Rice Mills, Mayagowdanahalli ...	6,243	32
5.	Sri Srinivasa Mills, Hampapur	9,000	48
6.	Sri Shantinatha Mills, Hampapur	9,902	28
7.	Sri Ranganatha Rice Mills, Hosagrahar	7,811	41
8.	Sri Jayalakshmi Rice Mills, Hosagrahar	5,767	47
9.	Sri Gayatri Rice Mills, Mirle	2,605	64
10.	Sri Shankarananda Rice Mills, Mirle	1,744	06
11.	Sri Saraswathi Mills, Mirle	3,062	28
12.	Sri Kshetrapala Rice Mills, Saligrama	5,025	95
13.	Sri Padmamba Rice Mills, Saligrama	9,209	21
14.	Srikantha Rice Mills, Saligrama	1,851	49
15.	Karnataka Mills, Hampapura	1,641	22
	Total ...	80,680	80

ಶ್ರೀ ಎಸ್. ಎಚ್. ತಮ್ಮಯ್ಯ.—1953-54ನೆಯ ಇನವಿಯಲ್ಲಿ ರೈಸ್ ಮಿಲ್‌ಗಳಲ್ಲಿ ಸರ್ಕಾರದವರು ಬತ್ತವನ್ನು ದಾಸ್ತಾನು ಮಾಡಿದ್ದು ಇನ್ನೂ ಇದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇದೆ.

ಶ್ರೀ ಎಸ್. ಎಚ್. ತಮ್ಮಯ್ಯ.—ಮಿಲ್ ಮಾಲೀಕರು ಸರ್ಕಾರದವರ ಬತ್ತವನ್ನು ಸ್ವಾಕ್ ಮಾಡಿರುವ ಗೋ-ಡೌನ್‌ಗಳಲ್ಲಿ ತಮ್ಮ ಸ್ವಂತ ಬತ್ತವನ್ನೂ ಇಟ್ಟು ಕೊಳ್ಳುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅಗ್ರಿಮೆಂಟಿಗೆ ವಿರುದ್ಧವಾಗಿ ಏನನ್ನೂ ಇಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಎಚ್. ತಮ್ಮಯ್ಯ.—ಕೆಲವು ರೈಸ್ ಮಿಲ್ ಮಾಲೀಕರು ತಮ್ಮಲ್ಲಿ ಸರ್ಕಾರದವರು ದಾಸ್ತಾನಿಟ್ಟಿದ್ದುದನ್ನು ಮಾರಿಕೊಂಡು ಈಗ ಸ್ಥಳದ ಅಧಿಕಾರಿಗಳು ಬತ್ತವನ್ನು ಕೇಳಿದಾಗ ಕೊಂಡುಕೊಂಡು ಕೊಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅಲ್ಲಿ ಇಲ್ಲಿ ಅಂಥ ದೂರುಗಳು ಬಂದಿವೆ. ಅದನ್ನು ವಿಚಾರಿಸುತ್ತಿದ್ದೇವೆ.

ಶ್ರೀ ಎಸ್. ಎಚ್. ತಮ್ಮಯ್ಯ.—ಇದುವರೆಗೆ ಎಷ್ಟು ಮಿಲ್ಲುಗಳಲ್ಲಿ ಆ ರೀತಿ ಆಗಿದೆಯೆಂದು ದೂರು ಬಂದಿದೆ ?

ಶ್ರೀ ಎಚ್. ಸಿದ್ದವೀರಪ್ಪ.—ನನಗೆ ದೂರುಗಳು ಬಂದಿಲ್ಲ. ಕೆಲವು ಮಿಲ್ಲುಗಳಲ್ಲಿ ಹೀಗಾಗಿದೆಯೆಂದು ಅನುಮಾನ ಬಂದಿದೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಕಾನೂನು ರೀತ್ಯಾ ಸರ್ಕಾರಿ ಬತ್ತವನ್ನು ಬದಲಾವಣೆ ಮಾಡುವುದಕ್ಕೆ ಅವಕಾಶವಿಲ್ಲ ಅಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಸರ್ಕಾರಿ ಬತ್ತವನ್ನು ಇಡುವಾಗ ಸ್ಥಳೀಯ ಅಧಿಕಾರಿಗಳನ್ನು consult ಮಾಡಿ ಇಟ್ಟಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—Consult ಮಾಡಿಯೇ ಇಟ್ಟಿದೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಹಾಗಾದರೆ ತಾವು ಸರ್ಕಾರದ ದುಡ್ಡು advance ಮಾಡುವಾಗ ಬತ್ತದ ದಾಸ್ತಾನಿಗೆ ಬೇಗ ಹಾಕಿಸಿಡುವುದಕ್ಕೆ ಆರ್ಡರ್ ಮಾಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಇದಕ್ಕೆ ಸಂಬಂಧಪಟ್ಟ ಪ್ರತಿಯೊಂದು ವಿಚಾರವೂ ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ agreement formನಲ್ಲಿದೆ. ಅದಕ್ಕನುಸಾರವಾಗಿ ಮಾಡುತ್ತೇವೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—Agreement ಪ್ರಕಾರ. ಸರ್ಕಾರದ ಬತ್ತವನ್ನು ಮಾಲೀಕರು ಮಾರಿಬಿಟ್ಟರೆ ಒಂದಕ್ಕೆ ನಾಲ್ಕರಷ್ಟು ಬೆಲೆಯಲ್ಲಿ ದುಡ್ಡು ಕೊಡಬೇಕಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಕೊಡಬೇಕೆಂದಿದೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಹಾಗಾದರೆ, ಈ ರೀತಿ ಮಾರಿದ್ದ ಪಕ್ಷದಲ್ಲಿ, ಅದರಂತೆ ಹಣವನ್ನು ಅವರಿಂದ ವಸೂಲು ಮಾಡಿಕೊಳ್ಳುವುದಕ್ಕೆರುವ ತೊಂದರೆಯೇನು ?

ಶ್ರೀ ಎಚ್. ಸಿದ್ದವೀರಪ್ಪ.—ತೊಂದರೆಯೇನಿಲ್ಲ. Agreementಗೆ ವಿರುದ್ಧವಾಗಿ ನಡೆದಿರುವ ಸಂದರ್ಭಗಳಲ್ಲಿ ಆ ರೀತಿ ಮಾಡುತ್ತಿದ್ದೇವೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಎಷ್ಟು ಸಂದರ್ಭಗಳಲ್ಲಿ ಆ ರೀತಿ ಮಾಡಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್ ಬೇಕು.

ಶ್ರೀ ಬಿ. ಎಸ್. ಬೋರಣ್ಣಗೌಡ.—ಪ್ರತಿಯೊಂದು ಡಿಸ್ಟ್ರಿಕ್ಟಿನಿಂದಲೂ ಸರ್ಕಾರಿ ಬತ್ತವನ್ನು ಮಾರಿದ್ದಾರೆಂದು complaints ಬಂದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಕೆಲವು ಕಡೆ ಬಂದಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ನುಗ್ಗಿಯ ಕಾಲದಲ್ಲಿ ಹಳೆಯ ಬತ್ತಕ್ಕೂ ಹೊಸ ಬತ್ತಕ್ಕೂ ಶೇಕಡ 30ರಷ್ಟು ಬೆಲೆಯಲ್ಲಿ ಹೆಚ್ಚು ಕಡಿಮೆಯಾಗುತ್ತದೆಂದು ಗೊತ್ತಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಗೊತ್ತಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ನುಗ್ಗಿಕಾಲದಲ್ಲಿ ಮಿಲ್‌ಗಳವರು ಸರ್ಕಾರಿ ಬತ್ತವನ್ನು ಅಕ್ಕಿಮಾಡಿ ಮಾರಿ, ಹೊಸ ಬತ್ತ ತುಂಬಿಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಗೊತ್ತಾದಾಗ ಫುಡ್ ನಫ್ಲೈ ಡೈರೆಕ್ಟರವರು ಹೋಗಿ ತನಿಖೆ ಮಾಡಿದ್ದಾರೆ. ಎಲ್ಲಾದರೂ ಹಾಗಾಗಿರುವುದು ಕಂಡು ಬಂದಿದ್ದರೆ ಅವರ ಮೇಲೆ ಒಪ್ಪಂದದ ಪ್ರಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಎಲ್ಲೆ complaints ಬಂದಿದೆಯೋ ಅಲ್ಲಿಗೆ ಹೋಗಿ ರೈಸ್ ಮಿಲ್ಲನ್ನು ಸರಿಯಾಗಿದೆಯೇ ಇಲ್ಲವೇ ಎಂದು ತಲಾಷ್ ಮಾಡಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇದುವರೆಗೆ ಎಲ್ಲಿಂದಲೂ ಹಾಗೆ ದುರ್ಬಿನಿಯೋಗವಾಗಿದೆಯೆಂದು ದೂರು ಬಂದಿಲ್ಲ. ಅನುಮಾನ ಬಂದಾಗ ಕೇಳಿದ್ದೇವೆ.

ಶ್ರೀ ಕೆ. ಪುಟ್ಟಸ್ವಾಮಿ.—ನುಗ್ಗಿಗಿಂತ ಮುಂಚೆ ಒಳ್ಳೆಯ ದರವಿರುವಾಗ ಈ ಬತ್ತವನ್ನೇಕೆ release ಮಾಡಲಿಲ್ಲ ?

ಶ್ರೀ ಎಚ್. ಸಿದ್ದವೀರಪ್ಪ.—ಕೊಂಡುಕೊಳ್ಳುವವರು ಯಾರು ? As a matter of fact, we must be thankful to the Government of India who came to our rescue and we have been able to dispose of the stock without incurring any loss to the State.

ಶ್ರೀ ಕೆ. ಪುಟ್ಟಸ್ವಾಮಿ,—ಆಕ್ಟೋಬರ್ ನವರಬರಿಗೆ ಮುಂಚೆ ನಮ್ಮ ದೇಶದಲ್ಲಿ ಅಕ್ಕಿ ಬಹಳ ತಗ್ಗಾಗಿದ್ದುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಅಕ್ಕಿ ಧಾರಣೆ ಹೆಚ್ಚಿದ್ದುದು ತಮಗೆ ಗೊತ್ತಾಗಿದೆಯೇ ?

Sri H. SIDDAVEERAPPA.—I cannot definitely say now, Sir. I must scrutinise the figures.

ಶ್ರೀ ಕೆ. ಪುಟ್ಟಸ್ವಾಮಿ.—ಆ ವೇಳೆಯಲ್ಲಿ ಸರ್ಕಾರದವರು ತಮ್ಮಲ್ಲಿದ್ದ ಬತ್ತವನ್ನು ಅಕ್ಕಿಮಾಡಿ ಸಾರ್ವಜನಿಕರಿಗೆ ಮಾರಿದ್ದರೆ ಅವತ್ತಿನ ಅಕ್ಕಿ ಬೆಲೆ ಹತೋಟಿಯಲ್ಲಿರುತ್ತಿರಲಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ದೇಶದಲ್ಲಿ controlled economy ಇದ್ದಾಗ ಯಾವ ರೀತಿ ಇಂಡಿಯಾ ಸರ್ಕಾರದವರು ಮಾಡಬೇಕೆಂದು ಹೇಳಿದ್ದರೋ ಆ ರೀತಿ ಮಾಡುತ್ತಿದ್ದೆವು. ಇತ್ತೀಚೆಗೆ ಡೀ-ಕಂಟ್ರೋಲ್ ಆದಮೇಲೆ ನಮ್ಮಲ್ಲಿರುವ ಸ್ಟಾಕನ್ನು ಹೇಗೆ dispose ಮಾಡಬೇಕೆಂದು ಗೊತ್ತಾಗಲಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಆಗ ಪಲ್ಲಕ್ಕೆ 26 ರೂಪಾಯಿಗಳಂತೆ ಕೊಂಡುಕೊಳ್ಳುತ್ತೇವೆಂದು ಮಿಲ್‌ಗಳವರು ಮುಂದೆ ಬಂದದ್ದು ನಿಜವೇ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ ; ಮಿಲ್‌ಗಳವರು ಕೇಳಿದಂತೆ ಮಾರಿದ್ದರೆ ಸರ್ಕಾರಕ್ಕೆ ಬಹಳ ಲುಕ್ಸಾನಾಗು

ತ್ತಿತ್ತು. In fact, we tried our level best to dispose of the stocks to them without any loss to the State, but they did not agree to the rates. As such, we had to request the Government of India to take delivery of the stocks.

Mr. SPEAKER.—His question is, whether they had offered Rs. 26 per palla ?

Sri H. SIDDAVEERAPPA.—They wanted to purchase it at a very reduced rate which would have entailed loss to Government.

Mr. SPEAKER.—What was the rate offered ?

Sri H. SIDDAVEERAPPA.—It was Rs. 4 or Rs. 5 less per palla than the rate at which we had purchased. . . .

ಶ್ರೀ ಕೆ. ಪುಟ್ಟಸ್ವಾಮಿ.—ತಾವು ಹೇಳುವ ಪ್ರಕಾರ 15-16 ರೂಪಾಯಿಗೆ ಒಂದು ಪಲ್ಲಾ ಭತ್ತ ಕೇಳಿದರೇ ?

Sri H. SIDDAVEERAPPA.—ಹೌದು. I have got records to show they offered Rs. 4 to Rs. 5 per palla less than the price at which we had purchased.

ಶ್ರೀ ಆರ್. ಅನಂತರಾಮ್.—ಮಿಲ್ ಮಾಲೀಕರು ಗಳಿಗೆ ಈ ಬತ್ತ ಕೊಟ್ಟಿದ್ದನ್ನು ಅಕ್ಕಿ ಮಾಡಿಸಿದರೆ, ಅವರು ಎಷ್ಟು ಇಳುವರಿಯಂತೆ ಕೊಡುತ್ತಾರೇ ?

Sri H. SIDDAVEERAPPA.—That depends upon the 'Iluvari' of the place.

ಶ್ರೀ ಆರ್. ಅನಂತರಾಮ್.—ಮ್ಯೈಸೂರು ದೇಶ ಕ್ಕೆಲ್ಲಾ ಏಕೆ uniform ಆಗಿ ಒಂದೇ ಇಳುವರಿಯನ್ನು ಗೊತ್ತು ಮಾಡಕೂಡದು ?

Sri H. SIDDAVEERAPPA.—In the very nature of things it is impossible. 'Illuvari' changes from place to place.

Small-scale Industries, Central aid.

Q —73. **Sri G. NARAYANA GOWDA** (Mulbagal-Srinivaspur).—

Will the Government be pleased to state :—

whether they have received any Central aid for the development of small-scale and cottage industries in the State during 54-55 ?

A.—**Sri H. SIDDAVEERAPPA** (Minister for Home and Industries).—

Yes. A total grant of Rs. 1,16,800 has been received for the Schemes noted below :—

Name of the Scheme	*Grant sanctioned by the Government of India*
	Rs.
Expansion of the Rattan Centre, Shimoga.	7,500
Expansion of the Hand-made Paper Centre, Central Industrial Workshop, Bangalore.	14,000
Expansion of the Mat Weaving Centre, Central Industrial Workshop, Bangalore.	11,000
Manufacture of utilitarian glass articles and bangles.	7,500
Leather Tanning and Stitching Industry.	47,300
Pottery (Red Clay Production Unit).	4,500
Starting of Training-*cum*-Production Centres.	25,000
Total ...	1,16,800

ಶ್ರೀ ಜಿ. ನಾರಾಯಣಗೌಡ.—(a) ಪ್ರಶ್ನೆಗೆ ಉತ್ತರವಾಗಿ 1,16,800 ರೂಪಾಯಿಗಳ ಗ್ರಾಂಟ್ ಬಂದಿದೆಯೆಂದು ಹೇಳಿದ್ದೀರಿ. ಇದೇನು lumpsum ಆಗಿ ಕೊಟ್ಟರೇ ಅಥವಾ ಒಂದೊಂದು ಗೃಹಕೈಗಾರಿ ಕೆಗೆ ಇಷ್ಟಿಷ್ಟು ಎಂದು ಪ್ರತ್ಯೇಕವಾಗಿ ಕೊಟ್ಟಿ ದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಪ್ರತಿಯೊಂದು ಸ್ಕೀಮಿಗೂ ಇಷ್ಟು ಎಂದು ಕೊಟ್ಟಿದ್ದಾರೆ. ಎಷ್ಟು ಕೊಟ್ಟಿದ್ದಾರೆಂಬುದನ್ನು ಉತ್ತರದಲ್ಲೇ ಹೇಳಿದೆ.

ಶ್ರೀ ಜಿ. ನಾರಾಯಣಗೌಡ.—Tanning ಮುಂತಾದುವುಗಳನ್ನು start ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಜಿ. ನಾರಾಯಣಗೌಡ.—ಯಾವ ಆಧಾರದ ಮೇಲೆ ಏರ್ಪಾಡು ಮಾಡುತ್ತೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಆಯಾ ಕೈಗಾರಿ ಕೆಗೆ ಎಷ್ಟು ಅವಶ್ಯಕತೆಯಿದೆ, ಸ್ಥಳದ ವಿದ್ಯಮಾನ ಹೇಗಿದೆ ಎಂಬುದನ್ನು ನೋಡಿಕೊಂಡು ಡೈರೆಕ್ಟರವರು ಶಿಫಾರಸು ಮಾಡುತ್ತಾರೆ. ಅದರಮೇಲೆ ಕೊಡು ತ್ತೇವೆ.

ಶ್ರೀ ಜಿ. ನಾರಾಯಣಗೌಡ.—ಕೋಲಾರದ ಉಣ್ಣೆ ಕೇಂದ್ರವನ್ನು ಅಭಿವೃದ್ಧಿಗೊಳಿಸಲಕ್ಕೆ ಗ್ರಾಂಟ್ ಕೊಡಬೇಕೆಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದರ ಬಗ್ಗೆ ಬೇರೆ ರೀತಿಯಲ್ಲಿ ಶಿಫಾರಸು ಹೋಗಿದೆ. Mill cloth cess fundನಿಂದ ಇದಕ್ಕೆ ಹಣ ಒದಗಿಸಬೇಕೆಂದು ಹೋಗಿದೆ.